- 'ಸಿನಿಕಾವ್ಯ ವಿಶೇಷ' ಜೂನ್ ಸಂಚಿಕೆಯ ಮೌಲ್ಯ ಹೆಚ್ಚಿಸಿದೆ. ಜನಪದ, ಬಯಲಾಟ, ತೊಗಲುಬೊಂಬೆಯಾಟ, ರಂಗಗೀತೆ, ಸಿನಿಗೀತೆ – ಈ ಎಲ್ಲಾ ಹಾಡುಗಳು ತಮ್ಮದೇ ಆದ ಸೊಗಸುಗಾರಿಕೆಯನ್ನು ಹೊಂದಿವೆ. ಅವುಗಳನ್ನು ಕುವೆಂಪು, ಬೇಂದ್ರೆ, ಅಡಿಗರ ಕಾವ್ಯದೊಂದಿಗೆ ಹೋಲಿಸುವುದು ಬಾಲಿಶತನ. ಓದು ಕಾವ್ಯವೇ ಬೇರೆ, ಕೇಳು ಕಾವ್ಯವೇ ಬೇರೆ ಎನ್ನುವುದೊಂದು ಸೂಕ್ಷ್ಮ ಸಂಗತಿ. ಅದನ್ನು ಕವಿಗಳು ಅರ್ಥಮಾಡಿಕೊಳ್ಳಬೇಕು.

**ಹುರುಕಡ್ಲಿ ಶಿವಕುಮಾರ, ಹಗರಿಬೊಮ್ಮನಹಳ್ಳಿ**

- ಈ ಸಂಚಿಕೆಯಲ್ಲಿ ಗೀತರಚನಕಾರ ದೊಡ್ಡರಂಗೇಗೌಡ ಅವರ ಬರಹದಲ್ಲಿ (ಸಿನಿಮಾ ಹಾಡುಗಳನ್ನು 'ಶುದ್ಧ' ಸಾಹಿತ್ಯ ಎನ್ನಬಹುದೇ?) ಸಾಹಿತ್ಯ ಹಾಗೂ ಸಿನಿಮಾ ಮಾಧ್ಯಮದ ನಡುವಿನ ವಿಶ್ಲೇಷಣೆ ಅರ್ಥಪೂರ್ಣವಾಗಿದೆ. ಚಿತ್ರಗೀತೆಗಳನ್ನು ಇತರೆ ಸಾಹಿತ್ಯದೊಡನೆ ತುಲನೆ ಮಾಡುವುದು ಅನವಶ್ಯಕ. ಬದಲಾವಣೆ ಜಗದ ನಿಯಮ ಅಲ್ಲವೇ?

**ರಾಜೀವ್ ಎನ್. ಮಾಗಲ್, ಸಕಲೇಶಪುರ**

- ಚಿದಾನಂದ ಸಾಲಿ ಅವರ ತೆಲುಗು ಕವಿ ಕೆ. ಶಿವಾರೆಡ್ಡಿ ಪರಿಚಯಾತ್ಮಕ ಬರಹ 'ಮಣ್ಣ ಹೂವಿನ ಘಮಲು!' ದಿಟಕ್ಕೂ ಪರಿಮಳದಿಂದ ಕೂಡಿದೆ.

**ಮೋಹನ ಹಣಗಿ, ಅಮೀನಗಡ**

- ವಸುಮತಿ ಉಡುಪ ಅವರ 'ಪ್ರಾರಬ್ಧ' ಕತೆ ವಾಸ್ತವಕ್ಕೆ ಹತ್ತಿರವಾಗಿದ್ದು, ನೈಜವಾಗಿ ಮೂಡಿಬಂದಿದೆ. ಹೆಣ್ಣಿನ ನೋವು ನಲಿವಿನ ಚಿತ್ರಣ ಮನಕಲಕುವಂತಿದೆ.

**ಕಮಲ ಓಂಕಾರಮೂರ್ತಿ**




- ಮಧುರಾ ಕರ್ಣಂ ಅವರ ಕತೆ 'ತೆರೆಮರೆಯ ಸತ್ಯಗಳು' ಅಹಂಕಾರ ಎಲ್ಲಾ ಕಾಲಕ್ಕೂ ಸಲ್ಲದು ಎನ್ನುವುದನ್ನು ಮಾರ್ಮಿಕವಾಗಿ ಹೇಳುತ್ತದೆ. ಹಳೆಮನೆ ರಾಜಶೇಖರ ಅವರ 'ಕಪ್ಪು ಸುಳಿ' ಕತೆಯ ಆಡು ಭಾಷೆ ಆಪ್ತ ಭಾವ ಮೂಡಿಸಿತು.

**ನೀಲಮ್ಮ ಕುಮಾರಪ್ಪ, ಲಿಂಗಸೂರು**

- 'ಕಲ್ಪನೆ ಕಾವ್ಯ'ದ ಎರಡೂ ಕವಿತೆಗಳು ಚೆನ್ನಾಗಿವೆ. ನಾಳೆಯ ಕನಸುಗಳನ್ನು ಕಣ್ಣಲ್ಲಿ ತುಂಬಿಕೊಂಡು ಇಂದಿನ ಕಷ್ಟಗಳಿಗೆ ಎದೆಗೊಟ್ಟು ಸಾಗುವ ಸಂಸಾರಗಳ ಚಿತ್ರಣದ ಕವಿತೆಗಳನ್ನು ಓದುವುದೇ ಖುಷಿ.

**ಭಾರತಿ ಕುಲಕರ್ಣಿ, ಧಾರವಾಡ**

- 'ವಿಮರ್ಶೆ ಯಾಕೆ? ಯಾರಿಗೆ?' ಅಂಕಣದಲ್ಲಿ ಹಿರಿಯ ವಿಮರ್ಶಕರಾದ ಎಚ್.ಎಸ್. ರಾಘವೇಂದ್ರ ರಾವ್ ಮತ್ತು ಟಿ.ಪಿ. ಅಶೋಕ ಅವರ ಪ್ರತಿಕ್ರಿಯೆಗಳು ಅರ್ಥಪೂರ್ಣವಾಗಿವೆ. ಒಳ್ಳೆಯ ಕೃತಿಗೆ ಎಲ್ಲಾ ಕಾಲಕ್ಕೂ ಬೆಲೆ ಇದ್ದೇ ಇರುತ್ತದೆ.

**ಬಿ.ಕೆ. ಓಂಕಾರಮೂರ್ತಿ, ಬಿ.ಜಿ. ಕೆರೆ**